## ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ

**ಸಿ.ಸಿ.ನಂ.520ಃ2017**

ಪಿರ್‍ಯಾದುದಾರರು ಃ ಸಿಮ್ರನ್, ಗಂಡಃ ಬಾಬು,
ಪ್ರಾಯಃ ಸುಮಾರು 32 ವರ್ಷ,
ವಾಸಃ ಆಶಾಬಡಾವಣೆ, ಆಲೂರು ಟೌನ್,
ಆಲೂರು ತಾಲೋಕು.

ವಿರುದ್ಧ

ಆರೋಪಿ ಃ ಸುರೇಶ್, ತಂದೆಃ ಪೌತಿ ಕೊಂಡಯ್ಯ,
ವಯಸ್ಕರು,
ವಾಸಃ ಪೆನ್‌ಷನ್ ಮೊಹಲ್ಲಾ,
ಸ್ವೀಪರ್ ಕಾಲೋನಿ, ಚಿಕ್ಕಮಗಳೂರು
ಟೌನ್ ಮತ್ತು ಜಿಲ್ಲೆ,

ಆಪಾಧನೆಯ ಸಾರಾಂಶ

ಆರೋಪಿ ಸಿಮ್ರನ್ ಆದ ನೀವು ಪಿರ್ಯಾದಿ ಸುರೇಶ್‌ರವರಿಂದ ದಿನಾಂಕಃ25.7.2017ರಂದು ಗೃಹೋಭಿವೃದ್ದಿಯ ಸಲುವಾಗಿ ಮತ್ತು ಕೈಸಾಲ ತೀರಿಸುವ ಸಲುವಾಗಿ ತುರ್ತಾಗಿ ಹಣದ ಅವಶ್ಯಕತೆ ಇದೆ ಎಂದು 1,65,000-00 ರೂಪಾಯಿಗಳನ್ನು ಕೈಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ಆರೋಪಿಯಾದ ನೀವು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ) ಚಿಕ್ಕಮಗಳೂರು ಟೌನ್, ಮಲಂದೂರು ರಸ್ತೆ ಶಾಖೆಯ ಚೆಕ್ ನಂ.205121ನ್ನು ದಿನಾಂಕಃ26.9.2017 ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರರು ನಗಧೀಕರಣಕ್ಕಾಗಿ ಸಲ್ಲಿಸಿದಾಗ ಈ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಚೆಕ್ಕು ಅಮಾನ್ಯಗೊಂಡಿದ್ದು, ಈ ಬಗ್ಗೆ ಪಿರ್ಯಾದುದಾರರು ತನ್ನ ವಕೀಲರ ಮೂಲಕ ದಿನಾಂಕಃ11.10.2017ರಂದು ನೋಂದಾಯಿತ ಅಂಚೆ ಮೂಲಕ

ನೋಟೀಸು ಕಳುಹಿಸಿದ್ದು, ಸದರಿ ನೋಟೀಸು ಆರೋಪಿಯಾದ ನಿಮಗೆ ಜಾರಿಯಾಗಿದ್ದರೂ ಸಹ ಚೆಕ್‌ನಲ್ಲಿ ನಮೂದು ಮಾಡಿದ ಹಣವನ್ನು ಪಾವತಿ ಮಾಡಿರುವುದಿಲ್ಲವೆಂದು ನಿಮ್ಮ ವಿರುದ್ಧ ಕಲಂ 138 ವರ್ಗಾವಣೆಯ ಲಿಖಿತಗಳ ಅಧಿನಿಯಮದನ್ವಯ ಆಪಾಧನೆ ಇದೆ.

ಪ್ರಶ್ನೆ.1 ಃ- ಈ ಮೇಲಿನ ಆಪಾಧನೆಯನ್ನು ಅರ್ಥಮಾಡಿಕೊಂಡಿರುವಿರಾ?

ಉತ್ತರಃ-

ಪ್ರಶ್ನೆ.2 ಃ- ಈ ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ವಿಚಾರಣೆಯಾಗಬೇಕೆ?

ಉತ್ತರಃ-

ಈ ಆಪಾಧನೆಯ ಸಾರಾಂಶವನ್ನು ಆರೋಪಿತನಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ ಹೇಳಲಾಗಿ ಅದನ್ನು ಆರೋಪಿತನು ಅರ್ಥಮಾಡಿಕೊಂಡು ನಂತರ ನೀಡಲಾದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ಸರಿಯಾದ ಮತ್ತು ನಿಜವಾದ ಉತ್ತರವೆಂದು ದೃಢೀಕರಿಸುತ್ತೇನೆ.

**ದಿನಾಂಕಃ8.5.2018**

**(ಆಶಾ ಕೆ.ಎಸ್)**
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಆಲೂರು.